# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ

## ವಿಶೇಷ ಎನ್.ಡಿ.ಪಿ.ಎಸ್. ಸಂಖ್ಯೆ: 8/2023

ಫ್ರಾಸಾ-01

ಚಾಸಾ-03

| | | |
|---|---|---|
| ಸಾಕ್ಷಿಯ ಹೆಸರು | - | ಗೋಪಾಲ ಯರೂರ |
| ತಂದೆ ಹೆಸರು | - | ತಾಯಪ್ಪ |
| ವಯಸ್ಸು | - | 45 ವರ್ಷ |
| ಉದ್ಯೋಗ | - | ಪೌರ ಕಾರ್ಮಿಕ |
| ವಾಸಸ್ಥಳ | - | ಕೇಶ್ವಾಪೂರ , ಹುಬ್ಬಳ್ಳಿ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | - | 16-07-2025. |

**ಮುಖ್ಯ ವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

ಚೇತನ ರಾಠೋಡರವರು ಹೆಚ್ ಡಿ ಎಂ ಸಿ ಯ ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ. 2022 ರಲ್ಲಿ ನಾನು ಚಟ್ನಿಮಠ ಎಂಬ ಏರಿಯಾದಲ್ಲಿ ಕಬರಸ್ಥಾನದಲ್ಲಿ ಕೆಲಸ ಮಾಡುತ್ತಿದ್ದೆ. ಆಗ 7-8 ಮಂದಿ ಪೋಲೀಸರು ಬಂದರು. ಮೊದಲು ಒಂದು ಬಿಳಿ ಬಣ್ಣದ ವಾಹನ ಹೋಯಿತು. ಅದರ ಹಿಂದೆ ಪೋಲೀಸರು ಹೋದರು. ಅದನ್ನು ಕಬರಸ್ಥಾನದ ಗೇಟ ಮುಂದೆ ಪೋಲೀಸರು ಅಡ್ಡಗಟ್ಟಿ ನಿಲ್ಲಿಸಿದರು. ಆನಂತರ ಆ ವಾಹನ ಪರಿಶೀಲನೆ ಮಾಡಿದರು. ಆಗ ಡ್ರೈವರ್ ಇಳಿದು ಓಡಿ ಹೋದ. ಪೋಲೀಸರು ಹಿಡಿಯಲು ಹೋದರು. ಗಾಡಿಯಲ್ಲಿದ್ದವನು ಸಿಕ್ಕಿದ. ಇನ್ನೊಬ್ಬರು ಓಡಿ ಹೋದವನನ್ನು ಪೋಲೀಸರು ಹಿಡಿದುಕೊಂಡು ಕರೆದುಕೊಂಡು ಬಂದರು. ಅವರಿಬ್ಬರನ್ನು ವಿಚಾರಣೆ ಮಾಡಿ ಗಾಡಿ ಪರಿಶೀಲನೆ ಮಾಡಿದರು. ಗಾಡಿಯ ಹಿಂದೆ ಡಿಕ್ಕಿಯಲ್ಲಿ 3 ಬ್ಯಾಗು ಇತ್ತು. ಪೋಲೀಸರು ಅದನ್ನು ಎಲ್ಲ ಬಿಚ್ಚಿ ನೋಡಿದರು. ಅದರಲ್ಲಿ ನಶಾ ತೆಗೆದುಕೊಳ್ಳುವ ವಸ್ತು ಇತ್ತು. ಪೋಲೀಸರು ಅದನ್ನು ನೋಡಿ ಚೆಕ್ ಮಾಡಿ ತೂಕ ಮಾಡಿದರು. ಅದು ತೂಕ ಮಾಡಿದಾಗ 4 ವರೆ ಕೆಜಿ ಒಂದು ಬ್ಯಾಗು ಇತ್ತು.

ಇನ್ನೊಂದು 7 ಕೆಜಿಯದು ಇತ್ತು. ಇನ್ನೊಂದು ಬ್ಯಾಗು 4 ವರೆ ಕೆಜಿ ಮೇಲೆ ಸ್ವಲ್ಪ ಜಾಸ್ತಿ ಇತ್ತು. ಅವೆಲ್ಲ ಬಿಚ್ಚಿ ನೋಡಿ ತೂಕ ಮಾಡಿ ಪ್ಯಾಕ ಮಾಡಿ ಪೋಲೀಸರು ತೆಗೆದುಕೊಂಡರು. ನಾವು ಅಲ್ಲೇ ಕೆಲಸ ಮಾಡುತ್ತಿದ್ದುದರಿಂದ ಪೋಲೀಸರು ನನ್ನನ್ನು ಮತ್ತು ಚೇತನ ರಾಠೋಡ ರವರನ್ನು ಕರೆಸಿದರು. ಆಗ ಅವರು ಆ ದಿನ ಅಲ್ಲಿ ಮಹಜರ ಮಾಡಿ ನಮ್ಮ ಸಹಿ ತೆಗೆದುಕೊಂಡರು. ಇದೆಲ್ಲ ಮಹಜರ ಮಾಡಿದಾಗ ಸುಮಾರು 12 ವರೆ ಆಗಿತ್ತು. ಇವೆಲ್ಲ ಪರಿಶೀಲನೆ ಮಾಡುವಷ್ಟರಲ್ಲಿ ಸುಮಾರು 2 ಘಂಟೆ ಆಯಿತು. ಈಗ ನಾನು ನೋಡುತ್ತಿರುವ ದಾಖಲೆ ನಾನು ಸಹಿ ಮಾಡಿದ ದಾಖಲೆ ಎಂದು ಸಾಕ್ಷಿ ಗುರುತಿಸಿದ್ದು ಅದನ್ನು ನಿಶಾನೆ ಪಿಃ 1 ಎಂದು ಅದರಲ್ಲಿ ಸಾಕ್ಷಿ ಗುರುತಿಸಿದ 2 ನೇ ಸಹಿಯನ್ನು ನಿಶಾನೆ ಪಿಃ 1 (ಎ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ಫೋಟೊಗಳನ್ನು ಆ ಸಮಯದಲ್ಲಿ ತೆಗೆದರು. ಅದರಲ್ಲಿ ನನ್ನ ಭಾವಚಿತ್ರ ಇದೆ. ಸಾಕ್ಷಿಗೆ ತೋರಿಸಿದ ಫೋಟೊಗಳನ್ನು ನಿಶಾನೆ ಪಿಃ 2 ರಿಂದ 19 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿಯ ಒಂದು ಭಾವಚಿತ್ರವನ್ನು ನಿಶಾನೆ ಪಿಃ 7 (ಎ) ಎಂದು ಗುರುತಿಸಲಾಯಿತು. ಸಾಕ್ಷಿ ಚೇತನ ರವರ ಭಾವಚಿತ್ರವನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಗುರುತಿಸಿದ ಚೇತನ ರವರ ಭಾವಚಿತ್ರವನ್ನು ನಿಶಾನೆ ಪಿಃ 7 (ಬಿ) ಎಂದು ಗುರುತಿಸಲಾಯಿತು. ಪೋಲೀಸರು ಈ ಪ್ಯಾಕೆಟಲ್ಲದೇ ಇನ್ನೇನೂ ವಶಪಡಿಸಿಕೊಂಡಿಲ್ಲ.

2. ಈಗ ನನಗೆ ತೋರಿಸಿದ ನೋಟೀಸನಲ್ಲಿರುವ ಸಹಿ ನನ್ನ ಸಹಿ. ಸಾಕ್ಷಿ ಪೋಲೀಸ ನೋಟೀಸನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿರುತ್ತಾರೆ. ಪೋಲೀಸ ನೋಟೀಸನ್ನು ನಿಶಾನೆ ಪಿಃ 20 ಎಂದು ಅದರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 20 (ಎ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ಸಹಿ ನೋಟೀಸು ಕೊಟ್ಟಾಗ ನಾನು ಮಾಡಿದ್ದೇನೆ. ಸಾಕ್ಷಿ ಗುರುತಿಸಿದ ಒಪ್ಪಿಗೆ ಪತ್ರವನ್ನು ನಿಶಾನೆ ಪಿಃ 21 ಎಂದು ಅದರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 21 (ಎ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ಫೋಟೊ ಆ ಸಮಯದಲ್ಲಿ ತೆಗೆದ ಫೋಟೊ ಸಾಕ್ಷಿ

ಗುರುತಿಸಿ ಫೋಟೊವನ್ನು ನಿಶಾನೆ ಪಿಃ 22 ಎಂದು ಗುರುತಿಸಲಾಯಿತು. ಅದನ್ನು ಬಿಟ್ಟು ನಾನು ಇನ್ನೇನೂ ನೋಡಿಲ್ಲ. ನಿಶಾನೆ ಪಿಃ 6 ರಿಂದ 16 ಮತ್ತು 18 , 19 ಫೋಟೊಗಳಲ್ಲಿ ಕಾಣುವ ಕಾರು ಆ ದಿನ ಪೋಲೀಸರು ನಿಲ್ಲಿಸಿದ್ದ ಕಾರು. ಆ ದಿನ ಓಡಿ ಹೋದ ನಂತರ ಹಿಡಿದುಕೊಂಡು ವ್ಯಕ್ತಿ ನ್ಯಾಯಾಲಯದಲ್ಲಿರುವ ಆರೋಪಿ ಎಂದು ಸಾಕ್ಷಿ 2 ನೇ ಆರೋಪಿಯನ್ನುನೋಡಿ ಗುರುತಿಸಿರುತ್ತಾರೆ. ಈಗ ನಾನು ನೋಡುತ್ತಿರುವ ಆರೋಪಿ ಆ ದಿನ ಗಾಡಿಯಲ್ಲಿ ಕುಳಿತಿದ್ದನು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ಸಾಕ್ಷಿ ಅಭಿಯೋಜನೆ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದು, ಕಾರಣ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿಸವಾಲು ಮಾಡಲು ಅನುಮತಿ ನೀಡಲಾಯಿತು).**

**ಪಾಟೀಸವಾಲು ಸರ್ಕಾರಿ ಅಭಿಯೋಜಕರಿಂದಃ**

3. ದಿಃ 4-12-2022 ರಂದು ಹುಬ್ಬಳ್ಳಿ ಉಪನಗರ ಪೋಲಿಸಠಾಣೆಯಿಂದ ಪೋಲೀಸರು ಬಂದು ನನ್ನನ್ನು ಮತ್ತು ಚೇತನ ರವರನ್ನು ಕರೆದುಕೊಂಡು ಹೋದರು ಅಂದರೆ ಸರಿ. ಆ ದಿನ ಪೋಲೀಸರು ಗಾಡಿ ನಂಃ ಎಂ.ಎಚ್-01-ಸಿ.ಎ-6935 ಗಾಡಿಯಲ್ಲಿ ಗಾಂಜಾ ತೆಗೆದುಕೊಂಡು ಹೋಗುತ್ತಿರುವುದಾಗಿ ಮಾಹಿತಿ ಬಂದಿರುವುದರಿಂದ ಅದರ ಬಗ್ಗೆ ದಾಳಿ ಮಾಡಲು ಸಹಕರಿಸಬೇಕೆಂದು ನನಗೆ ನಿಶಾನೆ ಪಿಃ 20 ರಂತೆ ನೋಟೀಸು ಕೊಟ್ಟರು ಅಂದರೆ ಸರಿ. ಅದಕ್ಕೆ ನಾನು ಆಯಿತು ಎಂದು ನಿಶಾನೆ ಪಿಃ 21 ರಂತೆ ಒಪ್ಪಿಗೆ ಪತ್ರ ನೀಡಿದೆ ಅಂದರೆ ಸರಿ. ಆ ಸಮಯದಲ್ಲಿ ಪೋಲೀಸರು ನನಗೆ ತೋರಿಸಿದ ಫೋಟೊ ತೆಗೆದರು ಅಂದರೆ ಸರಿ. ಆಗ ಅದೇರೀತಿ ಮಲ್ಲಿಕಾರ್ಜುನ ಎಂಬ ತುಾಕ ಮಾಡುವ ವ್ಯಕ್ತಿಗೂ ಕೂಡ ತೂಕ ಮಾಡಲು ಹೇಳಿ ನೋಟೀಸು ಕೊಟ್ಟರು ಆಗ ಅವರು ಒಪ್ಪಿಕೊಂಡರು ಅಂದರೆ ಸರಿ. ಆ ದಿನ ನಾನು , ಚೇತನ, ಪಿ ಐ ಮತ್ತು ಪಿ ಎಸ್ಐ ಮತ್ತು ತೂಕ ಮಾಡುವವರು ಪೋಲೀಸ ಜೀಪನಲ್ಲಿ ಆ

ಸ್ಥಳಕ್ಕೆ  ಚಾಟ್ನಿಮಠ ಕ್ರಾಸ ಬಳಿಹೋದರು ಮತ್ತು ಉಳಿದ ಸಿಬ್ಬಂದಿ ತಮ್ಮ ತಮ್ಮ ಗಾಡಿಯಲ್ಲಿ ಬಂದರು ಅಂದರೆ ಸರಿ. ಮಧ್ಯಾಹ್ನ 12.15 ಕ್ಕೆ ಸ್ಟೇಶನ್ ಬಿಟ್ಟು ಸ್ಥಳಕ್ಕೆ ಹೊರಟರು ಅಂದರೆ ಸರಿ. ಆಗ ಚಾಟ್ನಿಮಠ ಕ್ರಾಸ ಬಳಿ ಬಂದಾಗ ಸ್ಮಶಾನದ ಎದುರಿನಿಂದ ಬರುತ್ತಿದ್ದ ಗಾಡಿ ನೋಡಿ ನಮ್ಮ ಸಾಹೇಬರು ಇದೇ ಗಾಡಿ ಎಂದು ಆ ಗಾಡಿ ನಿಲ್ಲಿಸಿದರು ಅಂದರೆ ಸರಿ. ಆಗ ಪಿ ಎಸ್ ಐ ರವರು ಅವರನ್ನು ಹಿಡಿದುಕೊಂಡು ಯಾರು ಎಲ್ಲಿಗೆ ಹೋಗುತ್ತಿದ್ದೀರಿ ಎಂದು ನಮ್ಮ ಸಮಕ್ಷಮ ಅವರನ್ನು ವಿಚಾರಣೆ ಮಾಡಿದರು ಅಂದರೆ ಸರಿ. ಆಗ ಅವರುಗಳು ಒಬ್ಬರೊಬ್ಬರನ್ನು ಮುಖ ನೋಡಿಕೊಂಡು ಕನ್ನಡ ನಹೀ ಆತಾ ಎಂದು ಹೇಳಿದರು ಅಂದರೆ ಸರಿ. ಆಗ ಪಿ ಎಸ್ ಐ ರವರು ಅವರುಗಳು ಹೆಸರುಗಳನ್ನು ಹಿಂದಿಯಲ್ಲಿ ವಿಚಾರಿಸಲಾಗಿ ಅವರುಗಳು ತಮ್ಮ ಹೆಸರುಗಳನ್ನು ಹೇಳಿದರು ಅಂದರೆ ಸರಿ. ಆಗ ಪಿ ಎಸ್ ಐ ರವರು ನಿಮ್ಮ ಕಾರಿನಲ್ಲಿ ಮಾದಕ ವಸ್ತು ಗಾಂಜಾ ಸಾಗಾಟವಾಗುತ್ತಿದೆ ಎಂದು ಮಾಹಿತಿ ಬಂದಿದೆ ಎಂದು ಹೇಳಿದಾಗ ಅವರುಗಳು ಏನೂ ಮಾತನಾಡದೇ ಸುಮ್ಮನೆ ನಿಂತುಕೊಂಡರು ಅಂದರೆ ಸರಿ. ಅವರಿಗೆ ನೋಟೀಸು ಕೊಟ್ಟಾಗ ಅವರುಗಳು ಗೆಜೆಟೆಡ ಆಫೀಸರ ಮುಂದೆ ಪರಿಶೀಲನೆ ಮಾಡಿಸಿ ಎಂದು ಹೇಳಿದ್ದನ್ನು ಬರೆದುಕೊಂಡು ಅವರ ಸಹಿ ನನ್ನ ಸಮಕ್ಷಮ ಪಡೆದುಕೊಂಡರು ಅಂದರೆ ಸರಿ.

4. ಆನಂತರ ಪಿ ಎಸ್ ಐ ರವರು ಗೆಜೆಟೆಡ್ ಆಫೀಸರ ಮಕ್ತೆದಾರ ರವರನ್ನು ಅಲ್ಲಿಗೆ ಪೋನ ಮಾಡಿ ಕರೆಸಿದರು ಅಂದರೆ ಸರಿ. ಅವರನ್ನು ಪರಿಶೀಲನೆ ಮಾಡಿದಾಗ 1 ನೇ ಆರೋಪಿ ಬಳಿ 600 ರೂ ನಗದು ಮತ್ತು ಒಂದು ನೊಕಿಯಾ ಕೀ ಪ್ಯಾಡ ಮತ್ತು ಒಂದು ಸ್ಯಾಮಸಂಗ ಹ್ಯಾಂಡ ಸೆಟ್ ಇತ್ತು ಅಂದರೆ ಸರಿ. ಅದನ್ನು ಅವರು ಜಪ್ತು ಮಾಡಿಕೊಂಡರು ಅಂದರೆ ಸರಿ. ಸಾಕ್ಷಿಗೆ ಸ್ಯಾಮಸಂಗ್ ಹ್ಯಾಂಡ ಸೆಟ್ ಮತ್ತು ನೋಕಿಯಾ ಕೀ ಪ್ಯಾಡ ಮೊಬೈಲ ತೋರಿಸಿದರೆ ಅವುಗಳನ್ನು ಸಾಕ್ಷಿ ಗುರುತಿಸಿರುವುದಾಗಿ ಹೇಳಿರುತ್ತಾರೆ. ಅದೇ ರೀತಿ ನ್ಯಾಯಾಲಯದಲ್ಲಿರುವ ಆರೋಪಿಯನ್ನು ಪರಿಶೀಲನೆ ಮಾಡಿದಾಗ 100 ರೂ ಹಣ ಮತ್ತು ಸ್ಯಾಮಸಂಗ್ ಹ್ಯಾಂಡಸೆಟ್ ಸಿಕ್ಕಿತ್ತು ಅದನ್ನು ಕೂಡ ವಶಪಡಿಸಿಕೊಂಡರು. ಅದನ್ನು

ನಾನು ನೋಡಿದ್ದೇನೆ. ಅದನ್ನು ನೋಡಿದರೆ ಗುರುತಿಸಬಲ್ಲೆ. ಅಲ್ಲಿ ಸಿಕ್ಕಿದ ಕಂದು ಬಣ್ಣದ ಪೇಪರನಲ್ಲಿ ಟಿಕ್ಸೊ ಟೇಪ ಹಚ್ಚಿದ ಕವರುಗಳು ಇದ್ದವು. ಅವುಗಳನ್ನು ತೆಗೆದು ನೋಡಿದಾಗ ಅದರಲ್ಲಿ ಎಲೆ , ಬೀಜ ಇರುವ ಗಾಂಜಾ ಇತ್ತು ಅಂದರೆ ಸರಿ. ಅವುಗಳನ್ನು ತೂಕ ಮಾಡಿದಾಗ ಅವುಗಳಲ್ಲಿ ಒಂದು ಪಾಕೇಟ 4 ಕೆ ಜಿ 610 ಗ್ರಾಂ, ಇನ್ನೊಂದು 4 ಕೆ ಜಿ 570 ಗ್ರಾಂ , ಇನ್ನೊಂದು 6 ಕೆ ಜಿ 906 ಗ್ರಾಂ ಇತ್ತು ಅಂದರೆ ಸರಿ. ಅವುಗಳನ್ನು ಪ್ರತ್ಯೇಕವಾಗಿ ಪ್ಯಾಕ ಮಾಡಿ ವಶಕ್ಕೆ ಪಡೆದುಕೊಂಡು ಆರೋಪಿಗಳನ್ನು ವಶಕ್ಕೆ ತೆಗೆದುಕೊಂಡರು ಅಂದರೆ ಸರಿ. ಕಾರನ್ನು ಕೂಡ ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡರು ಅಂದರೆ ಸರಿ. ಅವರನ್ನು ವಿಚಾರಣೆ ಮಾಡಿದಾಗ ಅವರುಗಳು ಆಂಧ್ರಪ್ರದೇಶದ ವಿಶಾಖಾ ಪಟ್ಟಣ , ತೆಲಂಗಾಣ ಮತ್ತು ಮಹಾರಾಷ್ಟ್ರ ಕಡೆಗಳಲ್ಲಿರುವ ಹೈವೆ ರಸ್ತೆಗಳಲ್ಲಿ ಹೋಗಿ ಬರುವ ಲಾರಿ ಚಾಲಕರಿಂದ ಸಂಗ್ರಹಿಸಿದ್ದು ಎಂದು ಹೇಳಿದರು. ಆಗ ಆ ಲಾರಿ ಡ್ರೈವರ್ ಯಾರು ಯಾರಿಂದ ಸಂಗ್ರಹಣೆ ಮಾಡಿದ್ದೀರಿ ಎಂದು ಕೇಳಿದಾಗ ಆರೋಪಿಗಳು ಸರಿಯಾಗಿ ಉತ್ತರಿಸಲಿಲ್ಲ ಅಂದರೆ ಸರಿ. ವಿಚಾರಣೆ ಹಾಗೂ ಮಹಜರ ಮಾಡುವುದು ಎಲ್ಲ 12.15 ರಿಂದ 2.15 ರ ವರೆಗೆ ನಡೆಯಿತು ಅಂದರೆ ಸರಿ. ಆ ಸಮಯದಲ್ಲಿ ನನಗೆ ತೋರಿಸಿದ ನಿಶಾನೆ ಪಿಃ 2 ರಿಂದ 15 ಫೋಟೊಗಳನ್ನು ತೆಗೆದರು ಅಂದರೆ ಸರಿ. ಅಲ್ಲಿ ಸಿಕ್ಕ ನಗದು ಹಣ ಮತ್ತು ಮೊಬೈಲ ಪೋನ ನೋಡಿದರೆ ಗುರುತಿಸಬಲ್ಲೆ.

ಈ ಹಂತದಲ್ಲಿ ಮುದ್ದೆಮಾಲುಗಳನ್ನು ಗುರುತು ಮಾಡುವ ಕಾರಣಕ್ಕಾಗಿ ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಗಿದೆ.

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

**(ಬಿ. ಎಸ್. ಭಾರತಿ )**
ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ
ನ್ಯಾಯಾಧೀಶರು, ಧಾರವಾಡ.

**ಸಾಕ್ಷಿಗೆ ದಿಃ 25-7-2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

5. ಸಾಕ್ಷಿ 600 ರೂ ಮತ್ತು 2 ಫೋನುಗಳು ಅಂದರೆ ಒಂದು ನೋಕಿಯಾ ಮತ್ತು ಒಂದು ಸ್ಯಾಮಸಂಗ್ ಮೊಬೈಲ ಸೀಲು ಒಡೆದು ತೋರಿಸಿದಾಗ ಗುರುತಿಸಿರುತ್ತಾರೆ. 600 ರೂ ನ್ನು ಮುಮಾ-1 ಎಂದು , ನೋಕಿಯಾ ಮತ್ತು ಸ್ಯಾಮಸಂಗ್ ಮೊಬೈಲಗಳನ್ನು ಮುಮಾ-2 ಮತ್ತು 3 ಎಂದು ಕ್ರಮವಾಗಿ ಗುರುತಿಸಲಾಗಿದೆ. ಇವುಗಳನ್ನು ಕಸ್ಟಡಿಯಲ್ಲಿರುವ 1 ನೇ ಆರೋಪಿಯಿಂದ ಜಪ್ತು ಮಾಡಿದ್ದೇವೆ. 100 ರೂ ಮತ್ತು ಸ್ಯಾಮಸಂಗ್ ಹ್ಯಾಂಡಸೆಟ್ಟನ್ನು ನ್ಯಾಯಾಲಯದಲ್ಲಿರುವ 2 ನೇ ಆರೋಪಿಯಿಂದ ಜಪ್ತು ಮಾಡಿಕೊಂಡಿದ್ದೇವೆ. ಸಾಕ್ಷಿ ಅವುಗಳನ್ನು ಸೀಲು ಒಡೆದು ತೋರಿಸಿದಾಗ ಗುರುತಿಸಿರುತ್ತಾರೆ. 100 ರೂನ್ನು ಮುಮಾ-4 ಎಂದು , ಇನ್ನೊಂದು ಸ್ಯಾಮಸಂಗ್ ಫೋನನ್ನು ಮುಮಾ-5 ಎಂದು ಗುರುತಿಸಲಾಗಿದೆ.

**ಪಾಟಿ ಸವಾಲು ಮುಂದೂಡಲಾಯಿತು.**

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

(ಬಿ. ಎಸ್. ಭಾರತಿ )
ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ
ನ್ಯಾಯಾಧೀಶರು, ಧಾರವಾಡ.

**ಸಾಕ್ಷಿಯನ್ನು ದಿಃ 20-02-2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಪಾಟಿ ಸವಾಲು 1 ಮತ್ತು 2 ನೇ ಆರೋಪಿತರ ಪರ ಶ್ರೀ ಎಮ್.ಜಿ.ಕೆ ವಕೀಲರಿಂದಃ**

6. ನಾನು ಕಾರ್ಪೋರೇಶನನಲ್ಲಿ ಕೆಲಸ ಮಾಡುತ್ತೇನೆ. ನನಗೆ ಯಾವುದೇ ಯೂನಿಫಾರ್ಮ ಇದೆ. ನನಗೆ ಐಡೆಂಟಿಟಿ ಕಾರ್ಡ ಇದೆ. ಐಡಿ ಕಾರ್ಡ ಮತ್ತು ಡ್ರೆಸ್ ನಾವು ಕೆಲಸಕ್ಕೆ ಹೋಗುವ ಮುಂಚೆ ಹಾಕಿಕೊಂಡು ಹೋಗಬೇಕು ಅಂದರೆ ಸರಿ. ನಾವು ಗಟರ್ ಸ್ವಚ್ಛ ಮಾಡುವುದು ಕಸ ಗೂಡಿಸುವ ಕೆಲಸ ಮಾಡುತ್ತೇವೆ. ವಾರದಲ್ಲಿ 7 ದಿನ ಕೆಲಸ ಮಾಡುತ್ತೇನೆ. ಕೆಲಸ ಮಾಡುವಾಗ ಯೂನಿಫಾರ್ಮ ಹಾಕಿಕೊಂಡು ಕೆಲಸ ಮಾಡುತ್ತೇವೆ. ಬೆಳಿಗ್ಗೆ 7.15 ರಿಂದ ಮಧ್ಯಾಹ್ನ 2 ಘಂಟೆ ವರೆಗೂ ನಮ್ಮ ಕೆಲಸದ ಅವಧಿ. ಮೊದಲು ನಾವು ಕೆಲಸ ಮಾಡುವ ಕಡೆ ಹೆಬ್ಬೆಟ್ಟು ಗುರುತು ಹಾಕುವುದು ಇತ್ತು ಈಗ ಇಲ್ಲ. 2022 ರಲ್ಲಿ ನಾವು ಹೆಬ್ಬೆಟ್ಟು ಗುರುತು ಆಫೀಸನಲ್ಲಿ ಹಾಕುತ್ತಿದ್ದೆವು.

7. ದಿಃ 4-12-2022 ರಂದು ನಾವು ನಮ್ಮ ಚಟ್ನಿಮಠ ಕ್ರಾಸ್‌ದ ಹತ್ತಿರದಲ್ಲಿರುವ ಕಬರಸ್ಥಾನದಲ್ಲಿ ಕೆಲಸ ಬೆಳಿಗ್ಗೆ 8 ರಿಂದ ಮಧ್ಯಾಹ್ನ 2 ಘಂಟೆ ವರೆಗೂ ಮಾಡುತ್ತಿದ್ದೆವು ಅಂದರೆ ಸರಿ. ನಾವು ನಮ್ಮ ಕೆಲಸ ನಿಷ್ಠೆಯಿಂದ ಎಲ್ಲೂ ಹೋಗದೆ ಮಾಡುತ್ತೇವೆ ಅಂದರೆ ಸರಿ. 4-12-2022 ರಂದು ಕೂಡ ನಾವು ಮೈಗಳ್ಳತನ ಮಾಡದೇ ನಮ್ಮ ಕೆಲಸ ಮಾಡಿದ್ದೇವೆ ಅಂದರೆ ಸರಿ. ಚೇತನ ನಮ್ಮ ಸಾಹೇಬರು. ನಮ್ಮದು ಚೇತನರವರ ಒಡನಾಟ ಚೆನ್ನಾಗಿದೆ ಅಂದರೆ ಸರಿಯಲ್ಲ. ಗಾಡಿ ಹಿಡಿದ ದಿನವೇ ಅವತ್ತು ಚೇತನ ರವರನ್ನು ನೋಡಿದ್ದೇನೆ. ಆ ದಿನ ಆದಮೇಲೆ ನಾನು ಚೇತನ ರವರನ್ನು ನೋಡಿಲ್ಲ. ನಮ್ಮ ಹುಬ್ಬಳ್ಳಿ ಧಾರವಾಡ ಕಾರ್ಪೋರೇಶನ ಕಚೇರಿಯ ಅಧಿಕಾರಿಗಳು ಕೂಡ 7 ದಿನವೂ ಬರುತ್ತಾರೆ. ಅಡಿಷನಲ್ ಕಮೀಶನರ ರವರು ರವಿವಾರ ಕಚೇರಿಗೆ ಕೆಲಸಕ್ಕೆ ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅವರು ಕುಳಿತುಕೊಳ್ಳುವ ಚೆಂಬರು ರವಿವಾರ ತೆಗೆದಿರುವುದಿಲ್ಲ. ರವಿವಾರ ಕಚೇರಿಯಲ್ಲಿ ಯಾವುದೇ ರೀತಿ ಕೆಲಸ ಆಗುವುದಿಲ್ಲ. ನಮ್ಮ ಸಾಹೇಬರದು ಹೆಬ್ಬೆಟ್ಟು ಹಾಕುವುದು ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಚೇತನ

ರವರನ್ನು 4-12-2022 ರಂದು ಮಧ್ಯಾಹ್ನ ಸುಮಾರು 12 ಘಂಟೆಗೆ ನೋಡಿದೆ. ಇದಕ್ಕೂ ಮುಂಚೆ ನಾನು ಬೇರೆ ಕೇಸನಲ್ಲಿ ಪಂಚನಾಗಿ ಸಾಕ್ಷ್ಯ ನುಡಿದಿಲ್ಲ. ನಾವು ಕಬರಸ್ಥಾನದಲ್ಲಿ ಕೆಲಸ ಮಾಡುತ್ತಿದ್ದಾಗ ಸ್ಪೀಡಾಗಿ ಕಾರು ಬಂತು ಆಗ ನಾವು ಹಿಂದೆ ತಿರುಗಿ ನೋಡಿದೆವು ಆಗ ಅದರ ಹಿಂದೆ ಜೀಪ ಬಂತು ಅದು ಕಾರಿಗೆ ಅಡ್ಡವಾಗಿ ನಿಲ್ಲಿಸಿತು ಆಗ ಕಾರಿನಿಂದ ಒಬ್ಬ ಓಡಿ ಹೋದ. ಆಗ ನಾವು ನೋಡಿದೆವು. ಆಗ ಪೋಲೀಸರು ಒಬ್ಬರ ಹಿಂದೆ ಹೋಗಿ ಅವರನ್ನು ಹಿಡಿದುಕೊಂಡು ಬಂದರು . ಅಲ್ಲಿ ಅವರು ಆ ರೀತಿ ಹಿಡಿದುಕೊಂಡು ಬಂದಾಗ ನಾವು ಮತ್ತು ಅಲ್ಲೇ ಕಬಸ್ಥಾನದಲ್ಲೇ ಇದ್ದೆವು. ನಮ್ಮನ್ನು ಪೋಲೀಸರು ಯಾವುದೇ ವಾಹನದಲ್ಲಿ ಆ ಜಾಗಕ್ಕೆ ಕರೆದುಕೊಂಡು ಬಂದಿಲ್ಲ. ಅಲ್ಲಿ ಪಂಚನಾಮೆಯಾದಾಗ ನಾವು ನಿಂತಿದ್ದೆವು ಅಲ್ಲಿ ಏನೇನಾಯಿತು ನನಗೆ ಗೊತ್ತಿಲ್ಲ. ಪಂಚನಾಮೆಗೆ ನಾನು ಸಹಿ ಮಾಡಿದ್ದೇನೆ. ಆ ಪಂಚನಾಮೆಯಲ್ಲಿ ಏನೇನು ಬರೆದಿದ್ದಾರೆ, ಯಾರು ಬರೆದಿದ್ದಾರೆ ಎಂದು ನಾನು ಓದಿ ನೋಡಿಲ್ಲ. ಪಾಕೇಟ ಎಲ್ಲ ಪೋಲೀಸರು ನನ್ನ ಎದುರಿಗೆ ತೆಗೆದು ನೋಡಿದರು. ಪಂಚನಾಮೆಯಲ್ಲಿರುವ ಅಂಶಗಳನ್ನು ಅವರು ಹೇಳಿದರು. ಪಾಕೇಟನಲ್ಲಿ ಏನಿತ್ತು ಎಂದು ನಾನು ನೋಡಿಲ್ಲ ಅಂದರೆ ಸರಿಯಲ್ಲ. ಅವರು ತೋರಿಸಿದರು ಎಲೆ ತರಹ ಸಣ್ಣದಾಗಿತ್ತು. ಆ ಎಲೆ ಏನು ಎಂದು ನನಗೆ ಗೊತ್ತಿರಲಿಲ್ಲ ಆದರೆ ಅವರೇ ಹೇಳಿದರು ಅದು ಗಾಂಜಾ ಎಂದು. ಅದಕ್ಕೂ ಮುಂಚೆ ಗಾಂಜಾ ಎಲ್ಲೂ ನಾನು ನೋಡಿರಲಿಲ್ಲ. ಅವರು ಹೇಳಿದ್ದರಿಂದ ಅದು ಗಾಂಜಾ ಎಂದು ಹೇಳುತ್ತಿದ್ದೇನೆ. ಅದು ಗಾಂಜಾ ಎಂದು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ. ಅಲ್ಲಿ 3 ಪಾಕೇಟ ಇತ್ತು. ಒಂದು ಸುಮಾರು 4 ವರೆ ಕೆಜಿ ಇನ್ನೊಂದು ಸುಮಾರು 7 ಕೆಜಿ ಇತ್ತು.

8. ಆ ಅವಧಿಯಲ್ಲಿ ಹುಬ್ಬಳ್ಳಿ ಧಾರವಾಡ ನಗರ ಕಮೀಶನರ ಯಾರಿದ್ದರು ನನಗೆ ಗೊತ್ತಿಲ್ಲ. ಪಂಚರಾಗಿ ಎಂದು ಯಾರು ನನಗೆ ಆದೇಶ ಮಾಡಿಲ್ಲ, ಪೋಲೀಸರು ಕರೆದಿದ್ದರಿಂದ ಹೋಗಿದ್ದೇನೆ. ಪೋಲೀಸರು ನನಗೆ ಅಲ್ಲಿ ಬನ್ನಿ ಎಂದು ನೋಟೀಸ ಕೊಟ್ಟಿರಲಿಲ್ಲ, ಪೋನ ಮಾಡಿ ಮಾತ್ರ ಕರೆದರು. ನಾನು ಬರವಣಿಗೆಯಲ್ಲಿ ಯಾವುದೇ ಒಪ್ಪಿಗೆ ಪತ್ರ ಪೋಲೀಸರಿಗೆ ಬರೆದುಕೊಟ್ಟಿಲ್ಲ. ಆರೋಪಿಗಳಿಂದ

ಮೊಬೈಲ ವಶಪಡಿಸಿಕೊಂಡಿದ್ದಾರೆ. ಪಂಚನಾಮೆ ಆದ ಮೇಲೆ ನನ್ನನ್ನು ಪೋಲಿಸಠಾಣೆಗೆ ಕರೆದುಕೊಂಡು ಹೋದರು. ಪಂಚನಾಮೆ ಆದ ಮೇಲೆ ಪೋಲೀಸರು ಇನ್ನೊಂದು ಪತ್ರಕ್ಕೆ ಸಹಿ ಮಾಡಿಸಿಕೊಂಡರು. ಆ ಪತ್ರದಲ್ಲಿ ಏನಿದೆ ಎಂದು ನನಗೆ ಗೊತ್ತಿಲ್ಲ. ಅದಾದ ಮೇಲೆ ಮತ್ತೆ ನಾನು ಪೋಲಿಸಠಾಣೆಗೆ ಹೋಗಿಲ್ಲ. ಅಲ್ಲಿದ್ದ ಆ ಪಾಕೇಟಗಳನ್ನು ಪೋಲೀಸರೇ ತೆಗೆದುಕೊಂಡು ಹೋದರು. ಅದರಲ್ಲಿ ತೆಗೆದು ಬೇರೆ ಯಾವುದರಲ್ಲೂ ಇಡಲಿಲ್ಲ. ಈ ಪಂಚನಾಮೆ ಪೋಲೀಸರೇ ಬರೆದಿದ್ದಾರೆ. ಆರೋಪಿಗಳು ಹಿಂದಿ ಭಾಷೆ ಮಾತನಾಡುತ್ತಿದ್ದರು. ಅವರ ಜೊತೆ ಇದ್ದವರು ಹಿಂದಿ ಭಾಷೆ ಮಾತನಾಡುತ್ತಿರಬಹುದು ನನಗೆ ಗೊತ್ತಿಲ್ಲ.

ಮರುವಿಚಾರಣೆಃ ಇಲ್ಲ

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

Sd/-

(ಬಿ. ಎಸ್. ಭಾರತಿ )
ಪ್ರಧಾನ ಜಿಲ್ಲಾ, ಸತ್ರ ಹಾಗೂ ವಿಶೇಷ
ನ್ಯಾಯಾಧೀಶರು, ಧಾರವಾಡ.